ಅವಳು ಏನೂ ಹೇಳದೆ ಪುಸ್ತಕದ ಚೀಲ ಕುರ್ಚಿಯ ಮೇಲಿಟ್ಟು ಮಲಗುವ ಕೋಣೆಗೆ ಹೋದಳು. ಹಾಸಿಗೆ ಚೆನ್ನಾಗಿ ಒಪ್ಪ ಮಾಡಿಟ್ಟಿದ್ದರು. ಮೇಜಿನ ಮೇಲಿದ್ದ ಪುಸ್ತಕಗಳು, ಕಾಗದಗಳನ್ನೆಲ್ಲ ಅಂದವಾಗಿ ಜೋಡಿಸಿಟ್ಟಿದ್ದರು.

"ಅವನೊಬ್ಬ ಕೆಟ್ಟ ಮನುಷ್ಯ..." ಬಟ್ಟೆ ಬದಲಿಸುವಾಗ ಅವಳು ತನ್ನಷ್ಟಕ್ಕೆ ಹೇಳಿಕೊಂಡಳು: "ಕೆಟ್ಟ ಮನುಷ್ಯ..."

ಅಂದು ರಾತ್ರಿ ಅವಳಿಗೆ ಸರಿಯಾಗಿ ನಿದ್ರೆ ಬರಲಿಲ್ಲ. ಯಾವಾಗಲೂ ಕಿಟಕಿಯ ಪಕ್ಕ ಮಲಗುವ ಅಭ್ಯಾಸವಿರುವ ಅವಳು, ಅಂದು ಅಪ್ಪ, ಅಮ್ಮನ ನಡುವೆ ಬಂದು ಮಲಗಿದಳು. ಅಮ್ಮ ನಿದ್ರೆಯಲ್ಲಿ ಏನೇನೋ ಗೊಣಗಾಡುವಂತೆ ಮತ್ತು ಅವಳನ್ನು ತಳ್ಳಿ ಸರಿಸುತ್ತಿರುವಂತೆ ಮಾಡುತ್ತಿದ್ದಳು. ಸಿಗರೇಟಿನ ವಾಸನೆಯುಳ್ಳ ಅಪ್ಪನ ದಪ್ಪ ಮುಖದೊಂದಿಗೆ ಸೇರಿಕೊಂಡು ಮಲಗಿದಾಗ, ಅವಳಿಗೆ ಸ್ವಲ್ಪ ಸಮಾಧಾನವೆನಿಸಿತು. ಆದರೂ ನಿದ್ರೆಯಲ್ಲಿ ಕ್ಲಿಕ್ ಕ್ಲಿಕ್ ಎನ್ನುವ ಶಬ್ದ ಅವಳಿಗೆ ಕಿರಿಕಿರಿಯನ್ನುಂಟುಮಾಡುತ್ತಿತ್ತು. ಬೆಳಗ್ಗೆ ಅಮ್ಮ ಅವಳ ಮೈ ಕುಲುಕಿಸಿ ಕರೆದಾಗಲೇ ಅವಳಿಗೆ ಎಚ್ಚರವಾಗಿದ್ದು.

"ಆತನ ಮೈಮೇಲೆ ಯಾವುದಾದರೂ ಬಸ್ಸು ಹರಿದು ಆತ ಸಾಯ್ತಾನೆ..." ಅವನನ್ನು ಕಂಡಾಗ ಅವಳು ಹೇಳಿದಳು.

ಕೊಬ್ಬರಿ ಎಣ್ಣೆ ಮಿಲ್ಲಿಗಿಂತ ಆಚೆ, ಯಾರೂ ಇಲ್ಲದ ನಿರ್ಜನ ಸ್ಥಳದಲ್ಲಿ ಆತ ಈ ಮಕ್ಕಳಿಗಾಗಿ ಕಾಯುತ್ತಾ ನಿಂತಿದ್ದ. ಅವನ ಮುಂದೆ ಒಂದು ಸೈಕಲ್ ನಿಂತಿತ್ತು. ಸ್ವಲ್ಪ ದೂರ ಇರುವಾಗಲೇ ಆತ ಇವರನ್ನು ನೋಡಿ ನಕ್ಕ.

"ಫೋಟೊ ನೋಡಲ್ವಾ?..."

ಆತ ಕೇಳಿದ.

ಅವಳ ಮನಸ್ಸು ನಾಗಾಲೋಟದಲ್ಲಿತ್ತು. ಆತ ತನ್ನ ದೊಡ್ಡ ಜೇಬಿನಿಂದ ಫೋಟೊವನ್ನು ಹೊರಕ್ಕೆ ತೆಗೆದ. ತಾಳ್ಮೆಯಿಲ್ಲದೆ ಅವಳು ಆತನ ಕೈಯಿಂದ ಕಸಿದುಕೊಂಡಳು. ಫೋಟೊ ನೋಡಿದಾಗ ಅವಳಿಗೆ ತುಂಬ ಸಂತೋಷವಾಯಿತು. ಅವಳ ಮುಖ ಇಷ್ಟೊಂದು ಚೆಂದವಿತ್ತು ಎಂದು ಅವಳಿಗೆ ತಿಳಿದಿರಲಿಲ್ಲ. ಅವನ ಮುಖ ಎಂದಿನಂತೆ ಗಂಭೀರವಾಗಿಯೇ ಇತ್ತು. ಯಾರ ಮೇಲೆಯೋ ಕೋಪಗೊಂಡಿರುವವನಂತೆ. ಆತ ಫೋಟೊದ ಮತ್ತೆರಡು ಕಾಪಿಗಳನ್ನು ಸಹ ಆ ಮಕ್ಕಳಿಗೆ ಕೊಟ್ಟ.

"ಎರಡು ಸಾಕು..." ಅವಳು ಹೇಳಿದಳು. "ಒಂದು ನನಗೆ... ಮತ್ತೊಂದು ಅಭಿಲಾಷ್‌ಗೆ..."

"ಪರವಾಗಿಲ್ಲ ಮೂರನ್ನೂ ನೀವೇ ಇಟ್ಟುಕೊಳ್ಳಿ..."

ಅವರಿಬ್ಬರೂ ಫೋಟೊವನ್ನೇ ನೋಡುತ್ತಾ, ಪುಸ್ತಕದ ಚೀಲಗಳನ್ನು ಹೊತ್ತು ಕೊಬ್ಬರಿ ಎಣ್ಣೆ ಮಿಲ್ಲಿನ ಪಕ್ಕದ ತಂತಿಬೇಲಿಯ ಸಮೀಪದಿಂದ ನಡೆಯತೊಡಗಿದರು.

"ಮಕ್ಕಳೇ ಹೊರಟೇ ಬಿಟ್ರಾ?... ಹಾಗೆ ಹೊರಟೇ ಬಿಟ್ರೆ ಹೇಗೆ?... ಲೇ ಹುಡುಗಿ, ನೀನು ಸ್ವಲ್ಪ ಅಲ್ಲೇ ನಿಂತ್ಕೋ..." ಅವಳಿಗೆ ಆತ ಹೇಳಿ, ಹಿಂದಿನಿಂದ ಸೈಕಲನ್ನು ತಳ್ಳಿಕೊಂಡು ಬಂದ.

"ನೀನು ಬೇಕಾದ್ರೆ ಹೋಗು ಮಗನೇ... ನನಗೆ ಈ ಷೀನಾಳೊಂದಿಗೆ ಒಂದು ಗುಟ್ಟು ಹೇಳುವುದಕ್ಕಿದೆ..."

ಅವನು ಹೋಗದೆ ಅಲ್ಲೇ ನಿಂತಿರುವುದನ್ನು ಕಂಡು, ಆತ ಮೃದುವಾಗಿ ಕೇಳಿದ: "ಪೊಲೀಸರನ್ನ ಕರಿಯಬೇಕಾ?..."

ಅವನು ಗೊಣಗುತ್ತಲೇ ನಡೆಯತೊಡಗಿದ. ಸ್ವಲ್ಪ ಹೊತ್ತು ಒಂದು ಮರದ ಮರೆಯಲ್ಲಿ ಅವಿತಿಟ್ಟುಕೊಂಡ.